
ಮಕ್ಕಳ ಕವನ ಸಂಕಲನ (೬-೧೦ವರ್ಷ)

ಮಧು ಸಂಚಯ

ರಾಧಾ ಕುಲಕರ್ಣಿ



ನಿನಾದ ಪ್ರಕಾಶನ, ಹುಬ್ಬಳ್ಳಿ - ೨೦

ಮಧು ಸಂಚಯ

ಮಧು ಸಂಚಯ

(೬ ರಿಂದ ೧೦ ವರ್ಷದ ವರೆಗಿನ ಮಕ್ಕಳಿಗಾಗಿ ಕವನ ಸಂಕಲನ)

ಲೇಖಕರು :
ಶ್ರೀಮತಿ ರಾಧಾ ಕುಲಕರ್ಣಿ

ಪ್ರಕಾಶಕರು :
ನಿನಾದ ಪ್ರಕಾಶನ, ಹುಬ್ಬಳ್ಳಿ – ೨೦

MADHU SANCHAYA : A collection of Poems (Makkala Kavana Sangraha) Author : **Smt. Radha Kulkarni** Published by : Ninad Prakashan, Hubli - 20

First Edition : 2006

Pages : xii + 52

Copies : 1000

Price : Rs. 30/-

ಮಧು ಸಂಚಯ (ಮಕ್ಕಳ ಕವನ ಸಂಗ್ರಹ) ಲೇಖಕರು : ಶ್ರೀಮತಿ ರಾಧಾ ಕುಲಕರ್ಣಿ
ಪ್ರಕಾಶಕರು : ನಿನಾದ ಪ್ರಕಾಶನ, ಹುಬ್ಬಳ್ಳಿ – ೨೦

ಪ್ರಥಮ ಮುದ್ರಣ : ೨೦೦೬

ಪುಟಗಳು : xii + ೫೨

ಪ್ರತಿಗಳು : ೧೦೦೦

ಬೆಲೆ : ರೂ. ೩೦/–

ಮುಖಪುಟ ವಿನ್ಯಾಸ :
ಶ್ರೀ ರಾಜನ್ ಮೆನನ್, ಬೆಂಗಳೂರು

ರೇಖಾ ಚಿತ್ರಗಳು : ಫಣಿಭೂಷಣ

ಮುದ್ರಣ :
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ - 582 101.
✆ (08372) 237566, 235509 (O) 236578 (R)

ಮುನ್ನುಡಿ

ಶ್ರೀಮತಿ ರಾಧಾ ಕುಲಕರ್ಣಿಯವರಿಂದ ರಚಿತವಾದ ಈ ಕವನ ಸಂಕಲನಕ್ಕೆ ಮುನ್ನುಡಿಯ ಭಾರದ ಅವಶ್ಯಕತೆಯಿಲ್ಲ ಎಂಬುದು ನನ್ನ ನಂಬಿಕೆ ; ನುಡಿಯೇ ಅಷ್ಟು ಸೊಗಸಾಗಿರುವಾಗ ಮುನ್ನುಡಿ ಏಕೆ ? ಆದರೂ ಸಂಪ್ರದಾಯದಂತೆ ಕವನಗಳ ಸೊಗಸು ಕೆಡದಂತೆ ನಾಲ್ಕು ಮಾತು ಬರೆಯುವದು ನನ್ನ ಜವಾಬ್ದಾರಿ.

ಸಾಹಿತ್ಯ ಪ್ರಕಾರಗಳಲ್ಲಿ "ಮಕ್ಕಳ ಸಾಹಿತ್ಯ" ಒಂದು ಅತ್ಯಂತ ಪ್ರಮುಖವಾದ ಹಾಗೂ ಅವಶ್ಯವಾದ ಭಾಗ ; ಯುರೋಪನಲ್ಲಿ ಹಾಗೂ ಇಂಗ್ಲೀಷ್ ಸಾಹಿತ್ಯದಲ್ಲಿ ಹೆಚ್ಚು ವಿಸ್ತಾರವಾಗಿ ಬೆಳೆದ ಈ ಶಿಶುಸಾಹಿತ್ಯ, ಕನ್ನಡದಲ್ಲಿ ಚೆನ್ನಾಗಿ ಬೆಳೆಯುತ್ತಿರುವುದು ಕಳೆದ ೫೦ ವರ್ಷಗಳಿಂದೀಚೆಗೆ ಮಕ್ಕಳಿಗೆ ಸಾಹಿತ್ಯದಿಂದೇನು ? ಮಕ್ಕಳಿಗಾಗಿ ಸಾಹಿತ್ಯ ಸಾಧ್ಯವೇ ? ಎಂದು ಜನ ಎಂದುಕೊಂಡಿದ್ದಾಗ, ಪಂಜೆ ಮಂಗೇಶರಾಯರು, ಕುವೆಂಪುರವರು, ಜಿ. ಪಿ. ರಾಜರತ್ನಂ ಇವರೆಲ್ಲ ಮಾಡಿದ ಸಾಧನೆ ಈ ಕ್ಷೇತ್ರದಲ್ಲಿ ಅನುಪಮವಾದದ್ದು. "ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್ ಹೌ ಐ ವಂಡರ್ ವಾಟ್ ಯು ಆರ್", "ಜಾಕ್ ಲ್ಯಾಂಡ್ ಜಿಲ್, ವೆಂಟಅಪ್ ದ ಹಿಲ್" ಮುಂತಾದ ಇಂಗ್ಲೀಷ ಹಾಡುಗಳನ್ನು ಬಿಟ್ಟರೆ ಮಕ್ಕಳಿಗೆ ಇನ್ನೇನು ಹೇಳಿ ಕೊಡುವುದು ಎಂದುಕೊಂಡಿದ್ದಾಗ, ಅವುಗಳಿಗಿಂತಲೂ ಸುಂದರವಾದ ಮತ್ತು ಮಕ್ಕಳ ಮನಸ್ಸಿಗೆ ಮುದ ಕೊಡುವಂತಹ ಶಿಶುಗೀತೆಗಳು ಬರತೊಡಗಿದವು. "ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೆ', "ನಾಯಿ ಮರಿ, ನಾಯಿ ಮರಿ ತಿಂಡಿ ಬೇಕೆ ?", "ನಾಗರ ಹಾವೇ, ಹಾವೊಳು-ಹೂವೇ, ಬಾಗಿಲ ಬಿಲದಲಿ ನಿನ್ನಯ ಠಾವೇ" – ಇಂತಹ ಕವನಗಳು ಮಕ್ಕಳಿಗೆ ಹಾಗೂ ಅವರಿಗೆ ಕಲಿಸುವ ಶಿಕ್ಷಕರಿಗೆ ತುಂಬ ಸಂತೋಷ ನೀಡಿದವು. ಅಷ್ಟೇ ಅಲ್ಲದೇ ಶಿಶು ಸಾಹಿತ್ಯ ಅದರಲ್ಲೂ ಮಕ್ಕಳಿಗೆ ಇಷ್ಟವಾಗುವ ಧಾಟಿಯಲ್ಲಿ ಕವನಗಳನ್ನು ಬರೆಯುವದು ಹೇಗೆ ಎಂಬುದರ ಬಗ್ಗೆ ಮಾರ್ಗದರ್ಶಿಯಾದವು. ಅನೇಕ

ತರುಣ ಕವಿಗಳಿಗೆ ಈ ಗೀತೆಗಳು ಸ್ಫೂರ್ತಿ ನೀಡಿ ಹೆಚ್ಚಿನ ಗೀತೆಗಳು ಬರುವದಕ್ಕೆ ಕಾರಣವಾದವು. ಇಂಗ್ಲೀಷ ಕವನಗಳ ಧ್ವನಿ ಏರುಮುಖಿ ವಾದಾಗ "ಬಣ್ಣದ ತಗಡಿನ ತುತ್ತೂರಿ"ಯ ಧ್ವನಿ ಆಪ್ಯಾಯಮಾನ ವಾಯಿತು. ಆ ನಂತರ ಬಂದ ಅನೇಕ ಕವಿಗಳು ಬಹು ಸುಂದರವಾದ ಸುಲಭವಾದ ಮತ್ತು ಮಕ್ಕಳ ನೆನಪಿನಲ್ಲಿ ತುಂಬ ಕಾಲ ಉಳಿಯಬಲ್ಲಂತಹ ತಾಳ, ಲಯಗಳನ್ನು ಹೊಂದಿದ ಗೀತೆಗಳನ್ನು ಬರೆಯ ತೊಡಗಿದರು. ಕಳೆದ ಐದಾರು ವರ್ಷಗಳಲ್ಲಿಯೇ ಅನೇಕ ಇಂತಹ ಸಾರ್ಥಕ ಪ್ರಯೋಗಗಳು ನಡೆದಿವೆ. ದೊಡ್ಡವರಿಗೂ ಕೂಡ ಅವುಗಳನ್ನು ಕೇಳಿ ಕೈ ತಟ್ಟಿ ಹಾಡಬೇಕನ್ನುವಷ್ಟು ಚೆನ್ನಾಗಿರುವ ಕವನಗಳು ಬಂದಿವೆ.

ಈಗ ಶ್ರೀಮತಿ ರಾಧಾ ಕುಲಕರ್ಣಿಯವರು ಬರೆದಿರುವ ಈ ಕವನ ಸಂಕಲನದಲ್ಲಿ ಇಂತಹ ಅನೇಕ ಕವನಗಳಿವೆ. ಸುಮಾರು ನಲವತ್ತು ವರ್ಷಗಳ ಕಾಲ ಆದರ್ಶ ಶಿಕ್ಷಕಿಯಾಗಿ ಕೆಲಸ ನಿರ್ವಹಿಸಿದ ಶ್ರೀಮತಿ ರಾಧಾರವರಿಗೆ ಮಕ್ಕಳ ಮನಸ್ಸಿನ ಅಪೇಕ್ಷೆಗಳ ಅರಿವು ಚೆನ್ನಾಗಿದೆ. ಯಾವ ಹಂತದಲ್ಲಿ, ಯಾವ ಭಾವ, ಯಾವ ಪದ, ಯಾವ ಅರ್ಥದಲ್ಲಿ ಬಂದರೆ ಸೊಗಸು ಎಂಬುದರ ಸ್ಪಷ್ಟ ಕಲ್ಪನೆ ಇದೆ.

ಅಂತೆಯೇ ಆರರಿಂದ ಹತ್ತು ವರ್ಷದ ವರೆಗಿನ ಮಕ್ಕಳಿಗಾಗಿ ಬರೆದ ಕವನ ಸಂಕಲನ "ಮಧು ಸಂಚಯ" ಮಕ್ಕಳ ವಯಸ್ಸಿಗೆ ಅನುಗುಣವಾಗಿ ಪದ್ಯಗಳಲ್ಲಿ ತಾಳದ, ಪ್ರಾಸದ ಅಂಶಕ್ಕಿಂತಲೂ ವಿಷಯದ, ವಿಚಾರದ ಒತ್ತು ಹೆಚ್ಚುತ್ತಾ ಬಂದಿದೆ. ಪದ್ಯಗಳ ವಿಷಯಗಳ ಹರಹು ಕೂಡ ವಿಸ್ತಾರವಾಗಿದೆ. "ಆಣೆಕಲ್ಲಿನ ಮಳೆ"ಯಿಂದ "ಸೌರಮಂಡಲ'ದ ವರೆಗೂ ವಿಷಯದ ವ್ಯಾಪ್ತಿಯಿದೆ.

ಪರಿಸರದ ಪ್ರಜ್ಞೆ ಮೂಡಿಸುವ "ಗಿಡಮರ ಬೆಳೆಯಿರಿ, ಪರಿಸರ ಉಳಿಸಿರಿ" ಪದ್ಯಗಳ ಮೂಲಕ ಬೆಂಗಳೂರಿನ, ಮೈಸೂರಿನ, ವಿಜಾಪುರದ ದರ್ಶನ ಮೂಡಿಸುವ "ರೈಲುಗಾಡಿ ಝುಕ್ ಝುಕ್" "ಪ್ರಾಣಿಗಳ ಮಹತ್ವ ತಿಳಿಸುವ" ಪ್ರಾಣಿಗಳು ನಮ್ಮ ಪ್ರಾಣ ಸ್ನೇಹಿತರು" ನಾಗರಿಕ ಪ್ರಜ್ಞೆಯನ್ನು ಮನಸ್ಸಿಗೆ ಮುಟ್ಟಿಸುವ "ರಸ್ತೆ ನಿಯಮಗಳು" ಇಂತಹ ಕವನಗಳು

ಮಕ್ಕಳಿಗಾಗಿ ರಚಿಸಲಾದ ಪದ್ಯಗಳಿಗಿರುವ ಸಾಮಾಜಿಕ ಜವಾಬ್ದಾರಿಯನ್ನು ಸುಂದರವಾಗಿ ಪ್ರತಿಪಾದಿಸುತ್ತವೆ.

ಜರಿಯ ಲಂಗದ ಆಸೆಗೋಸ್ಕರ ತನ್ನ ತಾತನನ್ನೇ ಮದುವೆಯಾಗ ಬಯಸಿದ ಪುಟ್ಟ ಹುಡುಗಿಯ ಮುಗ್ಧ ಮನಸ್ಸನ್ನು ಹಾಸ್ಯದ ಲೇಪದೊಂದಿಗೆ ಮುಟ್ಟಿಸುತ್ತದೆ, "ಬರುವ ವರ್ಷ ಮರಳಿ ಮದುವೆ"

೨೩ ಕವನಗಳನ್ನೊಳಗೊಂಡ "ಮಧು ಸಂಚಯ" ಈ ವಯಸ್ಸಿನ ಮಕ್ಕಳಿಗೆ ನಿಜವಾಗಿಯೂ ಒಂದು ಅಪೂರ್ವ ಕೊಡುಗೆ.

ಇಂತಹ ಅನೇಕ ಪುಟ್ಟ ಪುಟ್ಟ ಮನಸ್ಸನ್ನು ಆಕರ್ಷಿಸುವ ಪದ್ಯಗಳಿವೆ. ಅವುಗಳಿಗೆ ಸಮರ್ಥಕರು ಸರಿಯಾದ ಧಾಟಿಯಿಂದ ಸಂಗೀತ ರಚನೆ ಮಾಡಿದರೆ ಅವು ತುಂಬ ಜನಪ್ರಿಯವಾಗುವದರಲ್ಲಿ ಯಾವ ಸಂದೇಹವು ಇಲ್ಲ.

ಇಂಥ ಒಳ್ಳೇಯ ಪದ್ಯಗಳನ್ನು ಕೊಟ್ಟ ಶ್ರೀಮತಿ ರಾಧಾ ಕುಲಕರ್ಣಿಯವರಿಗೆ ನಮ್ಮ ಅಭಿನಂದನೆಗಳು ಸಲ್ಲಬೇಕು. ಈ ಕವನಗಳ ಪ್ರಯೋಜನವನ್ನು ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿಗಳು ಪಡೆದಾಗ ಅವರ ಶ್ರಮ ಸಾರ್ಥಕ. ಈ ಸಂಕಲನವನ್ನು ಕನ್ನಡದ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆ ಎಂಬ ನಂಬಿಕೆ ನನಗಿದೆ.

ಜೂನ ೨೨, ೨೦೦೬

ಗುರುರಾಜ ಕರಜಗಿ
ಅಧ್ಯಕ್ಷರು,
ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್
(ACT)
ಬೆಂಗಳೂರು

ಲೇಖಕಿಯ ಲೇಖನಿಯಿಂದ.....

"ಮಧುಸಂಚಯ" - ೬ ರಿಂದ ೧೦ ವರ್ಷದ ಪುಟ್ಟ ಮಕ್ಕಳಿಗಾಗಿ ಬರೆದ ಕವನಸಂಕಲನ. ವನದಲ್ಲಿ ಅರಳಿ ನಿಂತ ಬಣ್ಣ ಬಣ್ಣದ ಪುಷ್ಪಗಳಿಂದ ಜೇನುನೋಣಗಳು ಮಧುವನ್ನು ಸಂಚಯಿಸುವಂತೆ ಈ ವಯಸ್ಸಿನ ಪುಟಾಣಿ ಮಕ್ಕಳು ಒಳ್ಳೇ ರಸಮಯವಾದ ಪರಿಸರದಿಂದ ಅದರ ಸಾರವನ್ನು ಸಂಗ್ರಹಿಸಲು ತೊಡಗಿರುತ್ತಾರೆ. ತಮ್ಮ ಪರಿಸರದಿಂದ, ತಮ್ಮ ಪರಿವಾರದವರಿಂದ, ತಮ್ಮ ಪರಿಚಯದವರಿಂದ ಹಾಗೂ ತಮ್ಮ ಪಾಠಶಾಲೆಯಿಂದ ವಿವಿಧ ಬಗೆಯ ವಿಷಯಗಳನ್ನು ಸಂಗ್ರಹಿಸಿ ತಮ್ಮ ಮೆದುಳಿನ ಹುಟ್ಟಿನಲ್ಲಿ ಕೂಡಿ ಹಾಕಿ ತಮ್ಮದೇ ಆದ ಜ್ಞಾನದ ಜೇನನ್ನು ತಯಾರಿಸುತ್ತಿರುತ್ತಾರೆ. ಅಂತೆಯೇ ಈ ಕವನಸಂಕಲನವನ್ನು "ಮಧು ಸಂಚಯ" ಎಂದು ಹೆಸರಿಸಿದ್ದೇನೆ.

ಈ ಕವನ ಸಂಗ್ರಹದಲ್ಲಿ ಈ ಚಿಣ್ಣರ ವಯಸ್ಸಿಗೆ ಅನುಗುಣವಾಗಿ ಅವರ ದಿನಚರಿಯ ಕವನಗಳಲ್ಲದೆ ಅನೇಕ ಕವನಗಳು ಅವರ ಪಠ್ಯಕ್ರಮವನ್ನು ಒಳಗೊಂಡಿವೆ. ಈ ಕವನಗಳಿಂದ ಪುಟಾಣಿ ಮಕ್ಕಳ ಮನರಂಜನೆಯ ಜೊತೆಗೆ "ಜ್ಞಾನ ಸಂಚಯ"ಕ್ಕೆ ಅನುಕೂಲವಾದರೆ, ಈ ಕವನ ಸಂಕಲನ ಸಾರ್ಥಕವೆಂದುಕೊಳ್ಳುತ್ತೇನೆ.

ಈ ಕೃತಿಯು ಹೊರಬರಲು ಅನುಗ್ರಹಿಸಿದ ಪರಮದಯಾಳು ಪರಮಾತ್ಮನಿಗೆ ಸಹಸ್ರ ನಮನಗಳು. ನನ್ನನ್ನು ಬೆಂಬಲಿಸಿದ ನನ್ನ ಕುಟುಂಬದ ವರಿಗೂ, ಸ್ನೇಹಿತರಿಗೂ ನನ್ನ ಕೃತಜ್ಞತೆಗಳು. "ಮಧು ಸಂಚಯ"ವನ್ನು ಮೊಟ್ಟ ಮೊದಲು ಓದಿ ನನ್ನನ್ನು ಪ್ರೋತ್ಸಾಹಿಸಿದ ಹಿರಿಯ ಕವಿಗಳಾದ ಎಚ್.ಎಸ್. ವೆಂಕಟೇಶಮೂರ್ತಿಯವರಿಗೆ ಹಾಗೂ ಪ್ರಸಿದ್ದ ಸಾಹಿತಿ ಶ್ರೀನಿವಾಸ ವೈದ್ಯರಿಗೆ ನಾನು ಉಪಕೃತಳು. ಈ ಕೃತಿಗೆ ಮುನ್ನುಡಿ ಬರೆದು ಸಹಕರಿಸಿದ ಪ್ರಸಿದ್ಧ ಶಿಕ್ಷಣತಜ್ಞರಾದ, ಶ್ರೀ ಗುರುರಾಜ ಕರಜಗಿಯವರಿಗೆ ಮನದಾಳದಿಂದ ಕೃತಜ್ಞತೆಗಳು.

"ಮಧು ಸಂಚಯ"ದ ಕವನಗಳಿಗೆ ಯೋಗ್ಯವಾದ ರೇಖಾಚಿತ್ರಗಳನ್ನು ಬರೆದು ಕೊಟ್ಟು, ಸಹಕರಿಸಿದ ನನ್ನ ಪ್ರಿಯ ವಿದ್ಯಾರ್ಥಿ ಎಚ್. ಎಮ್. ಫಣಿಭೂಷಣಗೆ ನಾನು ಹೃದಯದಿಂದ ಋಣಿ. ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ "ಗದುಗಿನ ತ್ವರಿತ ಮುದ್ರಣಾಲಯ" ಇವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

■■

ಮಧು ಸಂಚಯ

(೬ ರಿಂದ ೧೦ ವರ್ಷದ ವರೆಗಿನ ಮಕ್ಕಳಿಗಾಗಿ ಕವನಗಳು)

೧. ಆಣೆಕಲ್ಲಿನ ಮಳೆ ಬಂತು (ಆಲಿಕಲ್ಲಿನ ಮಳೆ ಬಂತು)



ಕಳ್ಳೆ ಮಳ್ಳೆ ಕಪಾಟ ಮಳ್ಳೆ
ಕಳ್ಳೆ ಮಳ್ಳೆ ಕಾಪಟ ಮಳ್ಳೆ
ಬಂತು ಮಳೆ ಬಂತು ಮಳೆ
ಬಂತು ಆಣೆಕಲ್ಲಿನ ಮಳೆ

ಟಕಾ ಟಕಾ, ರಪಾ ರಪಾ
ಬೀಳುತಿವೆ ರಪಾ ರಪಾ
ಓಡಿ ಓಡಿ ಹಿಡಿವ ಮೊದಲೆ
ಕರಗಿ ಹೋದವಾಗಲೆ

ಆಯ್ದ ಆಣೆಕಲ್ಲ ಮೋಜು
ಎಂಥ ಐಸ್‌ಕ್ರೀಮಿಗೂ ಇರದು
ನೆನೆದರಿಂತೂ ಚಿಂತೆಯಿಲ್ಲ
ತಿನ್ನಲೇಬೇಕು ಆಣೆಕಲ್ಲ

ಮಳೆ ನಿಂತರೆ ಮಳಲ ಆಟ
ಗುಬ್ಬಿ ಗೂಡು ಕಟ್ಟುವಾಟ
ಮಳಲಿನಲ್ಲಿ ಕಾಲ ತೂರಿ
ಗುಡ್ಡೆ ತಟ್ಟಿ ತಟ್ಟಿ ಕುಟ್ಟಿ

ಕಾಲ ಹೊರಗೆ ಎಳೆಯಲು
ಗೂಡು ಸಿದ್ಧವಾಗ್ವುದು
ಗಿಡದ ಹೂವು ಟೊಂಗೆ ತಂದು
ಗುಬ್ಬಿ ಮನೆಗೆ ತೋಟವಂದು

ಸಂಜೆ ಒಳಗೆ ಕಾಳು ಹಾಕೆ
ರಾತ್ರಿ ಗುಬ್ಬಿ ಬರುವ ಭ್ರಮೆ
ಮಳೆ ಮಳೆ ಬಂತು ಮಳೆ
ಕಳ್ಳೆ ಮಳ್ಳೆ ಕಪಾಟ ಮಳೆ

ಸಂಜೆ ಮಳೆಯ ಜೊತೆಗೆ ಇಂತು
ಇಂದ್ರಧನುಷ ಮೂಡಿ ಬಂತು

ಬದನೆ, ನೇರಳೆ ನೀಲಿ ಹಸಿರು
ಹಳದಿ ಕೇಸರಿ ಕೆಂಪು ನವಿರು

ರೋಡಲಿ ಕೊಡೆ ರೇನುಕೋಟು
ಟಪಟಪಟಪಿಸುವ ಗಮ್ ಶೂಸು
ಒಳಗೆ ಬಿಸಿ ಬಿಸಿ ಬೋಂಡ ರುಚಿ .
ಜೊತೆಗೆ ಸುಡು ಸುಡು ಟೀ ಕಾಫೀ.

೨. ಗಿಡಮರ ಬೆಳೆಯಿರಿ ಪರಿಸರ ಉಳಿಸಿರಿ



ಗಿಡಮರ ಬೆಳೆಯಿರಿ ಪರಿಸರ ಉಳಿಸಿರಿ
ಇಳೆಯಲಿ ಗೆಳೆಯರೆ ಸಗ್ಗವನಿಳಿಸಿರಿ

ಗಿಡಮರದಿಂದಲೆ ಜೀವನವೆಮಗೆ,
ಧರೆಯಲಿ ಹಸಿರು, ನೆಮ್ಮದಿ, ಒಸಗೆ
ಅನ್ನಾ, ಧಾನ್ಯ ಹೊಲಗಳಿಂದಲೇ
ಬೇಳೆಕಾಳು ಬೆಳೆಗಳಿಂದಲೇ

ಸಸ್ಯಗಳಿಂದಲೇ ತರಕಾರಿ
ಸಕ್ಕರೆ, ಬೆಲ್ಲ, ಚಹ, ಕಾಫೀ

---

* (ಪಾಠ್ಯಕ್ರಮ ಆಧಾರಿತ)

ಗಿಡಗಳಿಂದಲೇ ಹಣ್ಣು ಹಂಪಲು
ಸಿಗುವವು ಹೂವು ಸುಗಂಧ ಮಧು

ದನಗಳಿಗೂ ಸಹ ಮೇವು, ದಂಟು
ಪಕ್ಷಿ ಪ್ರಾಣಿಗೂ ಕವಳವು ಉಂಟು
ಔಷಧಿಗಳಿಗೂ ಬೇಕು ಸಸ್ಯಗಳು
ಬೇಕು ರಸಾಯನ, ರಬ್ಬರಿಗೂ

ಸಿಗುವದು ಹತ್ತಿ ನೂಲಿನ ಬಟ್ಟೆಗೆ
ಉರುವಲಿಗಾಗಿ ಸಿಗುವದು ಕಟ್ಟಿಗೆ
ಖಿಡಕಿ, ಬಾಗಿಲು, ಕಪಾಟುಗಳಿಗೆ
ಕುರ್ಚಿ, ಮೇಜು, ಮಂಚಗಳಿಗೆ
ಮರಗಳಿಂದಲೇ ಬರುವದು ಕಟ್ಟಿಗೆ
ಇವಿಲ್ಲದೆ ಜೀವನ ಅಸಾಧ್ಯ ಒಟ್ಟಿಗೆ

ಗಿಡಮರ ಕೊಡುವವು ಪ್ರಾಣವಾಯು
ಪ್ರದೂಷಣೆಯಿಂದ ಮುಕ್ತವಾಯು
ವನ್ಯಜೀವಿಗಳಿಗೆ ವನವಾಶ್ರಯವು
ಇಳೆಯೊಳು ಮಳೆಗೆ ಕಾರಣ ವನವು.

೧೦

* (ವಿಶ್ವ ಪರಿಸರ ದಿನದಂದು ಹೇಳಬಹುದು – ಜೂನ – ೫)
* (ವಿಶ್ವ ವನ ದಿನ – ಮಾರ್ಚ – ೨೧) (ಪಠ್ಯಕ್ರಮ ಆಧಾರಿತ)

೩. ಹಿತ್ತಲಲ್ಲಿ ಬೆಳೆದ ಫಲ




ಹಿತ್ತಲಲ್ಲಿ ಬೀಜವೊಂದ ನಾನು ಬಿತ್ತಿದೆ
ಮಣ್ಣು ಕಿತ್ತಿ ಸಡಿಲುಪಡಿಸಿ ಬೀಜವಿಟ್ಟು ಒತ್ತಿದೆ
ಮತ್ತೆ ಮೇಲೆ ನೀರು ಎತ್ತಿ ಸುತ್ತಲೆಲ್ಲ ಹಾಕಿದೆ
ಮತ್ತೆ ಮತ್ತೆ ನಿತ್ಯ ಹೋಗಿ ನೋಡುತಿದ್ದೆ
ನಾಲ್ಕು ದಿನದ ಮೇಲೆ ಚಿಕ್ಕ ಮೊಳಕೆ ಬಂದಿತು
ನೋಡಿ ಅದನು ನನ್ನ ಮನದಿ ಹರುಷ ತುಂಬಿತು
ಮುಂದೆ ಎರಡು ದಿನಗಳಲಿ ಬಂದವೆಲೆಗಳು
ಬೆಳೆಯಲದಕೆ ಹಿಡಿದವು ಹಲವು ತಿಂಗಳು
ರೆಂಬೆ-ಕೊಂಬೆ ಮೂಡಿ ಗಿಡ ಅಗಲವಾಯಿತು
ಮೊಗ್ಗೆ ಹೂವಿನಿಂದ ತುಂಬಿ ಅದು ಅಂದವಾಯಿತು

ಹಾಕುತಿದ್ದೆ ಬಿಡದೆ ಅದಕೆ ನೀರು, ಗೊಬ್ಬರ
ಹಣ್ಣು ಕಾಣಲೊಂದು ದಿನ ಹಿಡಿಸದಬ್ಬರ
ಚೀಂ ಚೀಂ, ಕಾವ್, ಕಾವ್ ಪಕ್ಷಿ ಸಂಕುಲ
ಅಳಿಲು, ಕೋತಿಗಳಿಗೆ ನೈವೇದ್ಯವಾ ಫಲ
ಹಿತ್ತಲಲ್ಲಿ ಬೆಳೆದ ಫಲದ ರುಚಿಯೇ ಬೇರೆ
ಕಿತ್ತು ಹಂಚಿದೆಲ್ಲರಿಗೂ ತೃಪ್ತಿ ಮೇರೆ ಮೀರೆ.

೦೦

೪. ಹುಚ್ಚು



ಅಪ್ಪಗೆ ಮೊಬೈಲ್ ಫೋನಿನ ಹುಚ್ಚು
ಅಮ್ಮಗೆ ಟಿ.ವಿ. ನೋಡುವ ಹುಚ್ಚು
ತಾತಗೆ ಪೇಪರ್ ಓದುವ ಹುಚ್ಚು
ಅಜ್ಜಿಗೆ ಸ್ವೆಟರ್ ಹೆಣೆಯುವ ಹುಚ್ಚು
ಅಣ್ಣಗೆ ಸ್ಕೂಟರ್ ಹೊಡೆಯುವ ಹುಚ್ಚು
ತಮ್ಮಗೆ ಕ್ರಿಕೆಟ್ ಆಟದ ಹುಚ್ಚು
ಅಕ್ಕಗೆ ಸೀರೆ ಒಡವೆಯ ಹುಚ್ಚು
ತಂಗಿಗೆ ಬಳೆ ರಿಬ್ಬನ್ನಿನ ಹುಚ್ಚು
ಪಾಪುಗೆ ಪೀಪಿಯ ಊದುವ ಹುಚ್ಚು
ನನಗಿದನೆಲ್ಲವ ನೋಡುವ ಹುಚ್ಚು

೫. ಪಾಸಿ ನಮ್ಮ ದೇಶೀ ಆಟಾ



ಕ್ರಿಕೆಟ್, ಹಾಕಿ, ಟೆನ್ನಿಸ್ ಎಲ್ಲಾ ವೆಚ್ಚದಾಟಾ
ಪಾಸಿ ನಮ್ಮ ದೇಶೀ ಆಟಾ, ಕುಂಟಾಟಾ, ಮುಟ್ಟಾಟಾ
ಗುಲ್ಲಿದಾಂಡು, ಸರಬಡಿಗೆ, ಗಿಡಮಂಗನಾಟಾ
ಕಬಡ್ಡಿ, ಖೊಖೊ, ಕಳ್ಳ–ಪೋಲಿಸಿನಾಟಾ
ರ್‍ಯಾಕೆಟ್ ಬೇಡ, ವಿಕೆಟ್ ಬೇಡ, ಬೇಡ ಬ್ಯಾಟು–ಬಾಲು
ಇವಕೆ ಸಾಕು ಸುತ್ತಲಿದ್ದ ಕಟ್ಟಿಗೆ, ಮರ, ಕಲ್ಲು
ಚೂರು ಕಾಸಿಗಾಡಬಹುದು ಲಗೋರಿ, ಬುಗುರಿ
ಆಣೆಕಲ್ಲು, ಕುಂಟುಬಿಲ್ಲೆಗೆ ಕಾಸೇಬೇಡ ನೋಡ್ರಿ

೧೧

೬. ಪ್ರಾಣಿ ನೋಡಿ ಪುಟ್ಟನ ಪ್ರಶ್ನೆ



ಪುಟ್ಟನ್ನೊಮ್ಮೆ ಕರಕೊಂಡು ಹೋದೆ
ಪ್ರಾಣಿ ಸಂಗ್ರಹಾಲಯಕೆ
ಯಾವ ಪ್ರಾಣಿ ನೋಡಿದರೂನೂ
ಪ್ರಶ್ನೆ ಕೇಳೇ ಕೇಳ್ತಿದ್ದ ಅವನು
ಆನೆ ನೋಡಿ ಕೇಳಿದ ಪುಟ್ಟಾ
ಇದಕ್ಯಾಕ ಎರಡೆರಡ ಬಾಲ ಅಕ್ಕಾ ?
ಹಿಂದೊಂದ ಬಾಲಾ ಮುಂದೊಂದ ಬಾಲಾ
ಅಂತೂ ಭಾಳ ಮಜಾ ಅಲ್ಲಾ ?
ಒಂಟೆ ನೋಡಿದ ತಕ್ಷಣ ಪುಟ್ಟಾ
ಪ್ರಶ್ನೆ ಬಾಣ ಬಿಟ್ಟೇ ಬಿಟ್ಟಾ

ನನಗೂ ಒಂದು ಒಂಟಿ ಹಂಗ
ಊಟಾ, ನೀರಿನ ಚೀಲಿದ್ರ ಹ್ಯಾಂಗ ?
ಝೀಬ್ರಾ ನೋಡಿ ಪುಟ್ಟಾ ಕೇಳಿದಾ
ಇದರ ಮೇಲೆ ಹತ್ತಿ ಅಕ್ಕಾ
ಕ್ರಾಸ್ ನಾವು ಮಾಡಬೇಕಲ್ಲಾ ?
ಬೆಳ್ಳಗ ಬಿಳಿ ಮೊಲಾ ನೋಡಿದಾ
ಕೂಡಲೆ ಪ್ರಶ್ನೆ ಅವಾ ಕೇಳಿದಾ
ಸ್ನಾನಾ ಮಾಡಬೇಕಾದ್ರೀ ಮೊಲಾ
ಎಷ್ಟ ಹನಿ ಹಕ್ಕೋತದಕ್ಕಾ 'ಉಜಾಲಾ' ?
ಜಿಗದಾಡೋ ಕೋತಿ ನೋಡಿದವನ
ವಿಚಾರ ಮಾಡ್ತಿದ್ದ ಒಂದಸವನ
ಖರೇ ಹೇಳಕ್ಕ ನೋಡಿ ಈ ಕೋತಿ
ಇದರಂಗದ ಏನ್ ನನ್ನ ಮೋತಿ ?
ಮಾಸ್ತರು ನನ್ನ ಪ್ರತಿಸರ್ತಿ
ಹಂಗ ಯಾಕ ಕರೀತಾರಂತಿ ?

೬೬

೭. ರೈಲು ಗಾಡಿ ಝುಕ್ ಝುಕ್ - ೧
(ಮಂಗಳೂರಿಂದ ಬೆಂಗಳೂರಿಗೆ)



ರೈಲು ಗಾಡಿ ಝುಕ್ ಝುಕ್
ರೈಲು ಗಾಡಿ ಝುಕ್ ಝುಕ್
ಮಂಗಳೂರಿಂದ ಬೆಂಗಳೂರಿಗೆ
ರೈಲು ಗಾಡಿ ಝುಕ್ ಝುಕ್
ರೈಲು ಗಾಡಿ ಝುಕ್ ಝುಕ್
ಬೆಂಗಳೂರ ಬಂತು ಬೆಂಗಳೂರು
ಇಳಿಯಿರಿ ಬೇಗ ಎಲ್ಲಾರೂ
ವಿಧಾನ ಸೌಧ ನೋಡಿ ಬನ್ನಿ
ಲಾಲ್‌ಬಾಗ್‌ನಲ್ಲಿ ಓಡಾಡಿ ಬನ್ನಿ
ಕಬ್ಬನ್ ಪಾರ್ಕ್‌ನಲ್ಲಿ ಸುತ್ತಾಡಿ ಬನ್ನಿ
ಪುರಾಣಿ ಟ್ರೇನ್ ಹತ್ತಿ ಬನ್ನಿ

ನೋಡಿ ವಿಶ್ವೇಶ್ವರ ಸಂಗ್ರಹಾಲಯ
ನೋಡಿ ನೆಹರೂ ತಾರಾಲಯ
ಬನ್ನೇರು ಘಟ್ಟಕ್ಕೆ ಹೋಗಲೇಬೇಕು
ಸಿಂಹಗಳ ಸಫಾರಿ ನೋಡಲೇಬೇಕು
ಬೈ ಬೈ ಹೇಳ್ರಿ ಬೆಂಗಳೂರಿಗೆ
ವಾಪಸ್ಸು ಹೋಗ್ರಿ ಮಂಗಳೂರಿಗೆ

* (ಜಾಗತಿಕ ಪರ್ಯಟನ ದಿನದಂದು ಹೇಳಬಹುದು ಸೆಪ್ಟೆಂಬರ ೨೭)

೮. ರೈಲು ಗಾಡಿ ಝುಕ್ ಝುಕ್ - ೨

(ಬೆಂಗಳೂರಿಂದ ಮೈಸೂರಿಗೆ)




ರೈಲು ಗಾಡಿ ಝುಕ್ ಝುಕ್
ರೈಲು ಗಾಡಿ ಝುಕ್ ಝುಕ್
ಬೆಂಗಳೂರಿಂದ ಮೈಸೂರಿಗೆ
ರೈಲು ಗಾಡಿ ಝುಕ್ ಝುಕ್
ಮೈಸೂರು ಬಂತು ಮೈಸೂರು
ಇಳಿಯಿರಿ ಬೇಗ ಎಲ್ಲಾರೂ
ನೋಡಿ ಬನ್ನಿ ವೃಂದಾವನ ತೋಟ
ಬಣ್ಣಬಣ್ಣಗಳ ಕಾರಂಜಿ ನೋಟ
ಜೊತೆಗೆ ಸಂಗೀತದ ಸವಿಯೂಟ

ತುಂತುರು ಹನಿಗಳ ಚಿನ್ನಾಟ
ಭವ್ಯ ಅರಮನೆಯಲಿ ಸುತ್ತಾಡಿ
ಮೃಗಾಲಯದಲಿ ಓಡಾಡಿ
ನೋಡಿ ಬನ್ನಿ ಕನ್ನಂಬಾಡಿ ಕಟ್ಟು
ಹತ್ತಿರವೇ ಇದೆ ರಂಗನತಿಟ್ಟು
ಇದುವೆ ಸುಂದರ ಪಕ್ಷಿಯ ತಾಣ
ಬರ್‍ತಾ ನೋಡಿ ಶ್ರೀರಂಗಪಟ್ಟಣ
ಹೋಗಿ ಟಿಪ್ಪು ಅರಮನೆಗೆ
ಬರ್‍ತಾ ಕೊಳ್ಳಿ ಬಣ್ಣದ ಆಟಿಗೆ
ಬೈ ಬೈ ಹೇಳಿ ಮೈಸೂರಿಗೆ
ವಾಪಸ್ಸು ಬನ್ನಿ ಬೆಂಗಳೂರಿಗೆ

* (ಜಾಗತಿಕ ಪರ್ಯಟನ ದಿನದಂದು ಹೇಳಬಹುದು – ಸೆಪ್ಟೆಂಬರ ೨೭)

೬. ರೈಲು ಗಾಡಿ ಝುಕ್ ಝುಕ್ - ೩

(ಖಾನಾಪುರದಿಂದ ವಿಜಾಪುರಕ್ಕೆ)



ರೈಲು ಗಾಡಿ ಝುಕ್ ಝುಕ್
ರೈಲು ಗಾಡಿ ಝುಕ್ ಝುಕ್
ಖಾನಾಪುರದಿಂದ ವಿಜಾಪುರಕೆ
ರೈಲು ಗಾಡಿ ಝುಕ್ ಝುಕ್
ವಿಜಾಪುರ ಬಂತು ವಿಜಾಪೂರಾ
ಇಳೀರಿ ಎಲ್ಲಾರೂ ಭರಾಭರಾ
ಬನ್ನಿ ಪ್ರಸಿದ್ಧ ಗೋಳಗುಮ್ಮಟಕ್ಕೆ
ಮೂರು ಪ್ರತಿಧ್ವನಿ ಕೇಳೋದಕ್ಕೆ
ಹತ್ತಿ ಬನ್ನಿ ಉಪ್ಪಲಿ ಬುರುಜಾ

ನೋಡಲೇಬೇಕು ಇಬ್ರಾಹಿಮ್ ರೋಜಾ
ಮುಲುಕ್ ಮೈದಾನ ತೋಫ ನೋಡಿ
ಬಾರಾಕಮಾನ್, ಚಾಂದ ಬಾವಡಿ
ಬೈ ಬೈ ಮಾಡಿ ವಿಜಾಪುರಕ್ಕೆ
ವಾಪಸ್ಸು ಬರ್ರಿ ಖಾನಾಪುರಕ್ಕೆ

* (ಜಾಗತಿಕ ಪರ್ಯಟನ ದಿನದಂದು ಹೇಳಬಹುದು – ಸೆಪ್ಟೆಂಬರ ೨೭)

೧೦. ನಮ್ಮ ಮನೆಯ ತೋಟ

(ಪಠ್ಯಕ್ರಮ ಆಧಾರಿತ)



ನಮ್ಮ ಮನೆಯ ತೋಟದಲ್ಲಿ
ಎಲೆ ಹೂಗಳ ರಂಗವಲ್ಲಿ
ಇಲ್ಲಿ ಇಹುದು ತುಳಸಿವನ
ಜೊತೆಗೆ ಮರುಗು ದವನ
ಸಣ್ಣ ಸಣ್ಣ ದಾನಿಗಳಲಿ
ಬಣ್ಣ ಬಣ್ಣದ ಹೂಗಳಿಲ್ಲಿ
ರಂಗು ರಂಗಿನ ಗುಲಾಬಿ ಹೂವು
ಅಂಗಳದ ತುಂಬ ಚೆಂಡು ಹೂವು
ಮೂಲೆಯಲ್ಲಿ ಬೆಳೆದ ಮಲ್ಲಿಗೆ

ಸೊಂಪಾಗಿ ಸುರಿದ ಸಂಪಿಗೆ
ಗುತ್ತಾಗಿ ಬೆಳೆದ ಗೊರಟಿಗೆ
ಸುತ್ತ ಕಣಗಲ ಬೇಲಿಗೆ
ಬಿಳಿಹಳದಿ ಶಾವಂತಿಗೆ
ನಳನಳಿಸುವ ಇರುವಂತಿಗೆ
ದಾಸವಾಳ ಕೆಂಪು, ಬಿಳಿ
ಅದರ ಬಳಿ ಕಾಡಬಾಳಿ
ದುಂಡು ಮಲ್ಲಿಗೆ ಚೆಂಡು ಮಲ್ಲಿಗೆ
ಕೆಂಡ ಸಂಪಿಗೆ ಕಾಡು ಮಲ್ಲಿಗೆ
ಸೂಜಿ ಮಲ್ಲಿಗೆ ಜಾಜಿ ಮಲ್ಲಿಗೆ
ಪಸರಿಬಿದ್ದ ಪಾರಿಜಾತ
ಬಿರಿದು ನಿಂತ ಸೂರ್ಯಕಾಂತ
ಕೆಂಪು ಬಿಳಿಯ ಗ್ಲಾಡಿಯೊಲಾ
ರಾತ್ರಿ ಅರಳುವ ಬ್ರಹ್ಮಕಮಲಾ
ಇಲ್ಲಿ ಅರಳಿ ನಿಂತ ಲಿಲ್ಲಿ
ಅಲ್ಲಿ ತೆನೆಯ ತುಂಬಿ ಆಬೋಲಿ
ಕೈ ಅಗಲದ ಡೇಲಿಯಾ
ಗೊಂಚ ಗೊಂಚಲು ಝಿನಿಯಾ
ಹೂವಿಂದ ಹೂವಿಗೆ ಸುತ್ತಿ ಸುತ್ತಿ
ಹಾರಾಡತಾವ ಪಾತರಗಿತ್ತಿ


ಭೃಂಗವೆಲ್ಲಾ ಸೇರತಾವ
ಪಕ್ಷಿ ಸಂಕುಲ ಹಾರತಾವ
ಪುಷ್ಪ ಪರಿಮಳ ಬೀರತಾವ
ಜೇನು ಮಧುವ ಹೀರತಾವ
ನಮ್ಮ ಮನೆಯ ತೋಟದಲ್ಲಿ
ಎಲೆ ಹೂಗಳ ರಂಗವಲ್ಲಿ.

೦೦

* (ಪಾಠ್ಯಕ್ರಮ ಆಧಾರಿತ)

೧೧. ಪುಟ್ಟ ಬಂದಾ, ಹಸ್ತೇನಂದಾ/ಅದಿತಿ

ಬಂದಳು ಹಸ್ತೇನಂದ್ಯು



ಪುಟ್ಟ ಬಂದಾ
ಹಸ್ತೇನಂದಾ
ಹಾಲು ಕಾಯ್ಸರಿ
ಬ್ಯಾಳಿ ಬೇಯ್ಸರಿ
ಸಾರು ಮಾಡ್ರಿ
ಅನ್ನಕ್ಕಿಡ್ರಿ
ಭಕ್ರಿ ಬಡೀರಿ
ಬೆಣ್ಣೆ ತೊಡೀರಿ
ಮಜ್ಜಿಗಿ ಕಡೀರಿ

ಕಾಯಿ ಒಡೀರಿ
ಚಟ್ನಿ ಕುಟ್ಟರಿ
ಥಾಲಿಪೆಟ್ಟು ತಟ್ಟರಿ
ಕೊಬ್ಬರಿ ತುರೀರಿ
ಗಜ್ಜರಿ ಹೆರೀರಿ
ಸೌತೇಕಾಯಿ ಕೊಚ್ಚರಿ
ಬೆಂಡಿಕಾಯಿ ಹೆಚ್ಚರಿ
ಪಲ್ಯಾ ಮಾಡ್ರಿ
ಹಪ್ಪಳಾ ಸುಡ್ರಿ
ಶೇಂಗಾ, ಕೊಬ್ಬರಿ
ಕೂಡಿಸಿ ರುಬ್ಬರಿ
ಭಜಿ ಕರೀರಿ
ರವಾ ಹುರೀರಿ
ಶಿರಾ ಮಾಡ್ರಿ
ತಡಾ ಬ್ಯಾಡ್ರಿ
ತಟ್ಟೆ ಇಡ್ರಿ
ನೀರು ಕೊಡ್ರಿ
ಚಾಪಿ ಹಾಸ್ರಿ
ಊಟಾ ಬಡಸ್ರಿ.

೧೧

೧೨. ಅದಿತಿ.... ಅದಿತಿ, ನಮ್ಮೆಲ್ಲರ ಪ್ರೀತಿ



ಅದಿತಿ.. ಅದಿತಿ ಹಲೊ ಚಿನ್ನಿ ಅದಿತಿ
ಎಲ್ಲಾರಿಗೂ ನಿನ್ನ ಮ್ಯಾಲೆ ಭಾಳ ಪ್ರೀತಿ
ಎಲ್ಲಾ ಡ್ರೆಸ್ಸಿನೊಳಗ ನೀ ಛಂದ ಕಾಣಸ್ತಿ
ಮಿಲಿಯನ್ ಡಾಲರ್ ನಗಿಯಿಂದ ಮರಳ ಮಾಡ್ತಿ
ಅಪ್ಪಾ ಅವ್ವಾ ಹೇಳ್ತಾರ ಫೋನಿನ್ಯಾಗ ನಿಂದ ಕಂತಿ
ಅದಿತಿ ಪುರಾಣ ಕೇಳೊದಂದ್ರ ನಮಗೂ ಆಸಕ್ತಿ,
ಅದಿತಿ.. ಅದಿತಿ ನೀ ಏನೇನ್ ಮಾಡ್ತಿ?
ಮನ್ಯಾಗಿದ್ದ ಸಾಮಾನೆಲ್ಲಾ ಕಿತ್ತಿ ಹಾಕ್ತಿ,
ಅಪ್ಪಾ ಅವ್ವನ್ನ ಒಂದಸವನ ನೀ ಯಾಕ ಕಾಡ್ತಿ?

ಅವರ ಕಡೀಂದ ತಕರಾರು ನಮಗ ದಿನಾ ಕೇಳಸ್ತಿ
ಮನೀ ತುಂಬ ಸೋಫಾ ಹಿಡಕೊಂಡು ಓಡಾಡ್ತಿರ್‍ತಿ
ಕಾಲು ಜರದು ಬಿದ್ದ ಕೂಡ್ಲೆ ಜೋರಾಗಿ ಅಳ್ತಿ
ತೂಫಾನ್ ಮೇಲ್‌ನ್ಹಂಗ ನೀ ಅಂಬೆಗಾಲಿಡ್ತಿ
ಕೈಯ್ಯಾಗಿನ ಸಾಮಾನ ಕಸಗೊಂಡ್ರ ಹಟಾ ಮಾಡ್ತಿ
ನಿನ್ನ ಆಟಿಗಿ ಇನ್ಯಾರೂ ಹಿಡೀಬಾರದಂತೀ
ಮಂದಿ ಹುಡುಗರ ಆಟಿಗಿ ಮಾತ್ರ ಮೆತ್ತಗ ತರ್‍ತಿ
ಏನೋ ಭಾಳ ಸೀರಿಯಸ್ ವಿಚಾರ ಮಾಡ್ಲಿಕ್ಕೆ ಹತ್ತಿ
ಯಾರ್‍ನ ಹ್ಯಾಂಗ ಕಾಡ್ಲೆಂತ ಅಕಲ ಹಾಕ್ತಿ
ಅಪ್ಪನ ಕಾಲಿಗೆ ಜೋತು ಬಿದ್ದು ಜೀಕಾ ಹಾಕ್ತಿ
ಅಮ್ಮನ ತೋಳಿನೊಳಗ ಮಾತ್ರ ಹಾಯಾಗಿ ಮಲಗ್ತಿ
ಆ ಆ ಊ ಊ ಹಾಡು ನೀ ಭಾಳ ಛಂದ ಹಾಡ್ತಿ
ಸುಬ್ಬಲಕ್ಷ್ಮಿನ್ನೂ ನೀ ಖಾತ್ರಿ ಮೀರಸ್ತಿ
ಅಪ್ಪನ ಕೈಯ್ಯಾಗಿನ ಲ್ಯಾಪ್‌ಟಾಪ್ ಕಸಗೊಂಡಬಿಡ್ತಿ
ಮೊಬೈಲ್ ಕಸಗೊಂಡು ನಿಂದ ನೀ ಭಾಷಾ ಮಾತಾಡ್ತಿ
ಅಮ್ಮನ ಜೋಡಿ ಅಡಿಕ್ಕೊಳ್ಳೊ ಆಟಾ ಆಡ್ತಿ
ಸೋಫಾದ ಹಿಂದ ಹೋಗಿ ನೀ ಅಡಿಕ್ಕೊಂಡು ಕೂಡ್ತಿ
ಅಪ್ಪಾ ನಿನ್ನ ಹುಡುಕಿದಾಗ ಕಿಲಕಿಲ ನಗ್ತಿ
ಓಡಿ ಹೋಗಿ ಜೋರಾಗಿ ಅವಗ ಮುದ್ದ ಕೊಡ್ತಿ
ಅಪ್ಪನ್ ತೊಡಿಯಿಂದ ಬ್ಯಾರೆ ಹುಡುಗರ್‍ನ ಕೂಡ್ಲೆ ಸರಸ್ತಿ
ನಿಂದ ಸೊತ್ತಿನ ಜಾಗಾ ಅಂತ ಹತ್ತಿ ಕೂಡ್ತಿ

ಅನ್ನಾ ಚಪಾತಿ ಊಟಾ ಎಲ್ಲಾ ಬ್ಯಾಡ ಅಂತಿ
ಕುರುಕಲು ತಿಂಡಿ ಮಾತ್ರ ನೀ ಬೇಕಂತಿ
ಹಾಲು ಕುಡಿ ಅಂದಾಗೆಲ್ಲಾ ಕಿರಿಕಿರಿ ಮಾಡ್ತಿ
ಚಹಾ ಕಾಫಿ ಕುಡಿಸಿದಾಗ ಬಾಯಿ ಚಪ್ಪರಸ್ತಿ
ಡಿ.ವಿ.ಡಿ. ಮ್ಯಾಲೆ ನರ್ಸರಿ ರೈಮ್ಸ ಕೇಳಬೇಕಂತಿ
ಹಚ್ಚಲಿಕ್ಕದನ್ನ ರಿಮೋಟ ತಂದು ಕೈಯ್ಯಾಗ ಕೊಡ್ತಿ
ಪುಟ್ಟಾ ಭಾಳ ಮಾಡಬ್ಯಾಡ ಮರಿ ನೀ ಮಸ್ತಿ
ನೋಡಲಾಸಲ್ಲಾ ನಿಮ್ಮ ಅವ್ವಾ ಅಪ್ಪನ ಈ ಅವಸ್ಥಿ
ಎಷ್ಟರ ಮ್ಯಾಥ್ಲಾಯ್ತಿ ನಿನ್ನ ಕಿತಾಪತಿ ?
ಹೊಸಾ ಕಥೀನ ಹುಡಕ್ತಿ ನೀ ಪ್ರತಿಸರ್ತಿ
ಎಲ್ಲಾರನೂ ಗೋಳ ಹೊಯ್ಕೊಂಡು ಗ್ವಾಡಿ ಹಾಯಸ್ತಿ
ಆದರೂ ಎಲ್ಲಾರಿಗೂ ನಿನ್ನ ಮ್ಯಾಲೆ ಭಾಳ ಪ್ರೀತಿ.

೧೩. ಮಾಡುವರು ನಮ್ಮ ಸೇವೆ ಅವರು



ಸಾಧ್ಯವಿಲ್ಲ ನಮ್ಮೆಲ್ಲ ಕೆಲಸ ನಾವೇ ಮಾಡಲು
ಬದುಕಬಹುದು ಎಲ್ಲರೂ ಸಹಾಯ ನೀಡಲು
ರೈತನವನು ನಮಗಾಗಿ ಬೆಳೆಯುವ ಧಾನ್ಯವ
ಲಾರಿಯವ ಅವನೆಲ್ಲ ಮಾರುಕಟ್ಟೆಗೆ ತರುವ
ನೇಕಾರ ನಮಗಾಗಿ ಬಟ್ಟೆಯನ್ನು ನೇಯುವ
ಅಂಗಡಿಕಾರ ತಂದು ಅವನು ನಮಗೆ ಮಾರುವ
ಶಿಂಪಿಗ ತಾ ನಮಗಾಗಿ ಬಟ್ಟೆಗಳ ಹೊಲಿವ
ಅಂಚೆಕಾರ ನಮ್ಮ ಪತ್ರ, ಮನಿ ಆರ್ಡರ್ ತರುವ
ಪೋಲಿಸ್‌ನವನು ನಮಗೆಲ್ಲ ರಕ್ಷೆಯನ್ನು ಕೊಡುವ
ಸಾರಿಗೆ ಪೋಲಿಸನು ರಸ್ತೆ ಓಡಾಟ ನಿಯಂತ್ರಿಸುವ

ಅಗಸ ನಮಗೆ ಬಟ್ಟೆ ಒಗೆದು ಮಡಿ ಮಾಡಿ ತರುವ
ವೈದ್ಯ ಮದ್ದು ಕೊಟ್ಟು ನಮ್ಮ ಆರೋಗ್ಯ ಕಾಪಾಡುವ
ಶಿಕ್ಷಕ ತಾ ಮಾಡುವ ನಮಗೆ ವಿದ್ಯಾದಾನವ
ಮರೆಯಲಾಗದೆಂದೂ ನಾವು ಇವರ ಋಣವ.

೧೦

---

* (ಅಂತರಾಷ್ಟ್ರೀಯ ಶ್ರಮಿಕರ ದಿನದಂದು ಹೇಳಬಹುದು – ಮೇ – ೧)

* (ಪಠ್ಯಕ್ರಮ ಆಧಾರಿತ)

೧೩. ಮಾಡುವರು ನಮ್ಮ ಸೇವೆ ಅವರು



ಸಾಧ್ಯವಿಲ್ಲ ನಮ್ಮೆಲ್ಲ ಕೆಲಸ ನಾವೇ ಮಾಡಲು
ಬದುಕಬಹುದು ಎಲ್ಲರೂ ಸಹಾಯ ನೀಡಲು
ರೈತನವನು ನಮಗಾಗಿ ಬೆಳೆಯುವ ಧಾನ್ಯವ
ಲಾರಿಯವ ಅವನೆಲ್ಲ ಮಾರುಕಟ್ಟೆಗೆ ತರುವ
ನೇಕಾರ ನಮಗಾಗಿ ಬಟ್ಟೆಯನ್ನು ನೇಯುವ
ಅಂಗಡಿಕಾರ ತಂದು ಅವನು ನಮಗೆ ಮಾರುವ
ಶಿಂಪಿಗ ತಾ ನಮಗಾಗಿ ಬಟ್ಟೆಗಳ ಹೊಲಿವ
ಅಂಚೆಕಾರ ನಮ್ಮ ಪತ್ರ, ಮನಿ ಆರ್ಡರ್ ತರುವ
ಪೋಲಿಸ್‌ನವನು ನಮಗೆಲ್ಲ ರಕ್ಷೆಯನ್ನು ಕೊಡುವ
ಸಾರಿಗೆ ಪೋಲಿಸನು ರಸ್ತೆ ಓಡಾಟ ನಿಯಂತ್ರಿಸುವ

ಅಗಸ ನಮಗೆ ಬಟ್ಟೆ ಒಗೆದು ಮಡಿ ಮಾಡಿ ತರುವ
ವೈದ್ಯ ಮದ್ದು ಕೊಟ್ಟು ನಮ್ಮ ಆರೋಗ್ಯ ಕಾಪಾಡುವ
ಶಿಕ್ಷಕ ತಾ ಮಾಡುವ ನಮಗೆ ವಿದ್ಯಾದಾನವ
ಮರೆಯಲಾಗದೆಂದೂ ನಾವು ಇವರ ಋಣವ.

೧೧

---

* (ಅಂತರಾಷ್ಟ್ರೀಯ ಶ್ರಮಿಕರ ದಿನದಂದು ಹೇಳಬಹುದು – ಮೇ – ೧)
* (ಪಠ್ಯಕ್ರಮ ಆಧಾರಿತ)

೧೪. ಪ್ರಾಣಿಗಳು ನಮಗೆ ಪ್ರಾಣಸ್ನೇಹಿತರು



ಪ್ರಾಣಿಗಳು ನಮಗೆ ಪ್ರಾಣ ಸ್ನೇಹಿತರು
ಅವುಗಳುಪಕಾರ ನೀ ಮಾನವ, ಮರೆಯದಿರು ॥
ಎತ್ತು ಉಳುವವು ನೆಲವ
ಹೊತ್ತು ಎಳೆವವು ಬಂಡಿಯ
ಮತ್ತೆ ಕುದುರೆಗಳ್ ಗಾಡಿಯ
ಆನೆ ಸಾಗಿಸುವವು ಅತಿ ಭಾರವ ॥
ಹಾಲು ನೀಡುವವು ಹಸು ಎಮ್ಮೆ ನಮಗೆ
ಮರಳಿನಲಿ ಸಾಗಲು ಬೇಕು ಒಂಟೆ
ಕತ್ತೆ ಹೊರುವವು ನಮ್ಮ ಬಟ್ಟೆ ಮೂಟೆ
ಎತ್ತು ಸುತ್ತುವವು ಎಣ್ಣೆಗಾಣದ ಮೇಟೆ ॥

ಕಾಯುವವು ನಾಯಿ ಮನೆ ನಂಬಿಕೆಯಿಂದ
ಚೀಲ, ಚಪ್ಪಲಿ ಮಾಡುವರು ಪ್ರಾಣಿಚರ್ಮಗಳಿಂದ
ಸಾಕಿ ಅವುಗಳ ನೀವು ಬಹು ಸ್ನೇಹದಿಂದ
ರಕ್ಷಿಸಿರಿ ಪ್ರಾಣಿಗಳ ಕ್ರೂರತೆಯಿಂದ ॥

---

* (ಜಾಗತಿಕ ಪಶು ಪೋಷಕ ದಿನದಂದು ಹೇಳಬಹುದು – ಜುಲೈ–೭)

* (ಪಠ್ಯಕ್ರಮ ಆಧಾರಿತ)

೧೫. ಋತುಗಳು

(ಪಠ್ಯಕ್ರಮ ಆಧಾರಿತ)



ಬೇಸಿಗೆ :-

ಬಂತು ಬಂತು ಬೇಸಿಗೆ
ತಂತು ತಂತು ಆತಿಶಕೆ
ಬೀಸಿ ದಣಿದೆ ಬೀಸಣಿಕೆ
ಮತ್ತೆ ಮತ್ತೆ ನೀರಡಿಕೆ
ತಿರುಗುತಿರಲು ಮೇಲೆ ಫ್ಯಾನು
ತಿನ್ನುತಿರಲು ಐಸ್‌ಕ್ರೀಮು
ಬೆವರು ಹನಿ ಸೋರುತಿರಲು
ಕೊಡೆಯ ಹಿಡಿದು ಸಾಗುತಿರಲು
ಬಂತು ಬಂತು ಬೇಸಿಗೆ
ತಂತು ತಂತು ಆತಿಶಕೆ



ಮಳೆಗಾಲ :-

ಬಂತು ಬಂತು ಮಳೆಗಾಲ
ತಂತು ತಂತು ಮೋಡಜಲ
ನೀರು ಹರಿಯಿತು ಕಲಕಲ
ಇಣುಕಿ ಬಂತು ಇಂದ್ರಜಾಲ
ಮೋಡ ಕವಿದು ಹನಿಗರಿಯಿತು
ಗುಡು ಗುಡು ಗುಡು ಗುಡುಗಿತು
ಮಿಂಚು ಮಿಂಚಿ ಮಾಯವಾಯ್ತು
ಎಲ್ಲೆಡೆ ನೀರು ನೀರಾಯ್ತು
ದಾರಿತುಂಬ ಕೊಡೆಗಳೆಲ್ಲ
ಮಳೆಕೋಟಲಿ ಮಕ್ಕಳೆಲ್ಲ

ಕಾಗದ ನಾವ ತೇಲಿಸುವರಲ್ಲ
ಗುಬ್ಬಿಗೂಡು ಕಟ್ಟುವರೆಲ್ಲ
ನೆಂದು ಮಂದಿ ಓಡುತಿಹರು
ಸಂದಿ ಗೊಂದಿ ಸೇರುತಿಹರು
ಗಿಡಗಳಿಗೆಲ್ಲಾ ಸ್ನಾನವಾಯ್ತು
ರೈತರಿಗೆಲ್ಲಾ ಖುಷಿ ಆಯ್ತು
ಬಂತು ಬಂತು ಮಳೆಗಾಲ
ತಂತು ತಂತು ಮೋಡ ಜಲ.




ಛಳಿಗಾಲ:- ಬಂತು ಬಂತು ಛಳಿಗಾಲ
ತಂತು ನಡುಕ ಮೈಗೆಲ್ಲ!
ಸ್ವೆಟರ್, ಕೋಟು ಉಣ್ಣೆ ಟೋಪಿ

ಒಂದರ ಮೇಲೊಂದ್ ಹಾಕಿ
ಕಾಲಿಗೆ ಕಾಲುಚೀಲ ಏರ್ಸಿ
ಹೀರುತ ಬಿಸಿ ಟೀ, ಕಾಫೀ
ಛಳಿಗೆ ನೋಡಿ ಬಿರಿದ ಕಾಲ
ಒಡೆದ ತುಟಿ ಒರಟು ಗಲ್ಲ
ಬಂತು ಬಂತು ಛಳಿಗಾಲ
ತಂತು ನಡುಕ ಮೈಗೆಲ್ಲ!

●●

೧೬. ಬರುವ ವರ್ಷ ಮರಳಿ ಮದುವೆ !



ಅಕ್ಕಗಂದು ಮದುವೆಯೆಂದು
ಲೆಕ್ಕ ಮೀರಿ ಮಂದಿ ಬಂದು
ಚೆಕ್ಕಂದದ ಹರಟೆಯಲ್ಲಿ
ಚಿಕ್ಕವರನೆ ಮರೆತರು.

ಬಂತು ಚಿನ್ನದೊಡವೆ ಮೂಟೆ
ಅಂತೆ ಜರಿಯ ಸೀರೆ ಪೇಟೆ
ಅಂತೂ ಅಕ್ಕ ಧನ್ಯಳು
ಎಂಥ ಲಾಟ್ರಿ ಹೊಡೆದಳು.

ಕಣ್ಣು ಬಿಟ್ಟು ನೋಡುತಿದ್ದ
ನನ್ನ ಸಹನೆ ಮೀರಿತು

ಮುನ್ನ ಓಡಿ ತಾತನೆಡೆಗೆ
ಎನ್ನ ದೂರನರುಹಿದೆ.

"ಏಕೆ ತಾತ ಪಕ್ಷಪಾತ ?
ಆಕೆಗೇಕೆ ಸೀರೆಯೊಡವೆ ?
ಬೇಕು ನನಗೂ ಜರಿಯ ಲಂಗ
ಜೋಕೆ ಮತ್ತೆ ಕೊಡದಿರೆ !"

"ಬಚ್ಚಬಾಯಿ ತೆರೆದು ತಾತ
ಹುಚ್ಚು ಹುಚ್ಚಾಗಿ ನಕ್ಕ
ಪೆಚ್ಚು ನಾನು ನೋಡುತಿದ್ದೆ
ಕಿಚ್ಚು ಹೊಟ್ಟೆಯಲ್ಲಿರೆ."

"ನಾಳೆ ಮದುವೆ ಅಕ್ಕನಿಗೆ
ವೇಳೆ ಬರಲಿ ನಿನಗೂ ತರುವ
ಕೇಳಿದಷ್ಟು ಸೀರೆಯೊಡವೆ
ಗೋಳು ಹುಯ್ಯಬೇಡ ಮರಿ."

"ಮುಂದೆಯೇಕೆ ನನ್ನ ಮದುವೆ ?
ಇಂದೆಯಾಗಿ ಹೋಗಲಿ
ತಂದೇ ಬಿಡುವ ಸೀರೆಯೊಡವೆ
ಎಂದು ಎಳೆದೆ ತಾತನ."

''ಮೊಂಡುತನ ಸಾಕು ಚಿನ್ನ
ಗಂಡನನ್ನೇ ಮಾರಿ ಬರುವ
ಗಂಡುಬೀರೆ ನಿನಗೆ ತಾನೆ
ಗಂಡನೆಲ್ಲಿ ಸಿಗುವ ಕಾಣೆ.''

''ಏಕೆ ಹಾಗೆ ನೆಪವು ತಾತ
ಬೇಕಿದ್ದರೆ ನೀನೆ ಆಗು
ಬಾಕಿಯೆಲ್ಲ ಬೇಕಿಲ್ಲ
ಸಾಕು ಜರಿಯ ಲಂಗವಿರೆ.''

ಬಿಡದೆ ನಡೆದ ಹಟಕೆ ತಾತ
ನಡೆದ ಸೋತು ಪೇಟೆಗೆ
ಒಡನೆ ಬಂತು ಜರಿಯ ಲಂಗ
ಕೊಡದೆ ಬಿಡದ ವಧುವಿಗೆ.

ಜರಿಯ ಲಂಗ ಧರಿಸಿ ನಾನು
ಭರದಿ ಸಾರಿ ಅಕ್ಕಗೆಂದೆ,
ಬರಿಯ ಜಂಬ ಬೇಡ ಅಕ್ಕ.
ಅರಿಯೆ ನನಗೂ ನಾಳೆ ಮದುವೆ !

ನೆಂಟರೆಲ್ಲ ಸೇರಿಕೊಂಡು
ಗಂಟೆಕಾಲ ನಕ್ಕರು
ತಂಟೆಯೇಕೆ ಅವರದೆಲ್ಲ
ತುಂಟಿಗಾಯ್ತು ಜರಿಯಲಂಗ.

ಹೊರಟಳಕ್ಕ ಗಂಡನೊಡನೆ
ಮರುದಿನವೇ ಊರಿಗೆ
ಮರುಗಿದರು ಮನೆಯ ಜನ
ಅರಿಯದೆನಗೆ ಕಾರಣ.


ಸಂಜೆ ಬಸ್ಸಿಗೆನ್ನ ತಾತ
ಪಂಜೆಯುಟ್ಟು ಸಿದ್ಧನಾದ
ಅಂಜಿ ಹೋಗಿ ಅಪ್ಪಿಕೊಂಡೆ
ಮಂಜುಗೂಡಿತೆನ್ನ ಕಣ್ಣು.

‘‘ಬರುವ ವರ್ಷ ಮತ್ತೆ ತಾತ
ಮರಳಿ ನನಗೂ ನಿನಗೂ ಮದುವೆ
ಬರಲು ಮಾತ್ರ ಮರೆಯಬೇಡ
ಜರಿಯ ಲಂಗ ಮತ್ತೆ ತರುವಾ.’’

ಮೊದ್ದು ಮರಿ ಎನುತ ತಾತ
ಗದ್ದ ಹಿಡಿದು ಮುದ್ದನಿತ್ತ
ಬಿದ್ದು ಬಿದ್ದು ನಕ್ಕರೆಲ್ಲ
ಪೆದ್ದಳಂತೆ ನಿಂತೆ ನಾನು.

೧೭. ಆಕಾಶದ ರಂಗಮಂಚ

(ಪಠ್ಯಕ್ರಮ ಆಧಾರಿತ)




ಆಕಾಶದ ವಿಶಾಲ ರಂಗಮಂಚದಲ್ಲಿ
ನಾಟಕ ನಡೆವುದು ದಿನರಾತ್ರಿ ಇಲ್ಲಿ ॥
ಅರುಣೋದಯ ಸಮಯದಿ ಪೂರ್ವದಲ್ಲಿ
ಕೆಂಪು ರಂಜಿತ ರಾಗ ರಂಗವಲ್ಲಿ ॥
ಸಪ್ತ ಅಶ್ವಗಳ ರಥದಿ ಸೂರ್ಯ ಬರುವ
ಅರುಣ ಸಾರಥಿ ಇರಲು ಬೆಳಕು ತರುವ ॥
ಕತ್ತಲದು ಕಳೆದು ಬೆಳಗುತಿದೆ ವಿಶ್ವ
ತಂಪ ತೊಡೆದು ನೇಸರ ನೀಡುವ ಕಾವ ॥
ಮಧ್ಯಾಹ್ನವರೆಗೂ ಏರುತ್ತ ಮೇಲೆ ಮೇಲೆ
ಇಳಿಯುವ ಸೂರ್ಯ ಮೂರು ಸಂಜೆಗೆ ॥

ಕೆಂಪಿನೋಕುಳಿ ಚೆಲ್ಲಿ ಪಶ್ಚಿಮ ದಿಶೆಗೆ
ಮರೆಯಾದ ಸೂರ್ಯ ಕ್ಷಿತಿಜದೊಳಗೆ ||
ಮೆಲ್ಲ ಮೆಲ್ಲನೆ ಮುಸುಕಿತಾಗ ಕತ್ತಲೆ
ಮಿಣುಕಿ ಇಣುಕುತಿಹವುನಕ್ಷತ್ರ ಮಾಲೆ ||
ಕಾಣಿಸಿದ ಚಂದ್ರ ಇವುಗಳ ಮಧ್ಯದಲ್ಲೆ
ಗುರು,ಮಂಗಳ,ಶನಿ,ಶುಕ್ರಮಿನುಗುತಲೆ ||
ಕಾಣದಾಗುವ ಕ್ಷೀಣಿಸುತ್ತ ಅಮವಾಸ್ಯೆ ಬರಲು
ಬಿಂಬವದು ದಿನದಿನಕೆ ಬೆಳೆಯುತಿರಲು ||
ಹುಣ್ಣಿಮೆಗೆ ಬೆಳಗುವ ಚಂದ್ರ ಪೂರ್ಣವಾಗಿರಲು
ಬೆಳದಿಂಗಳಿಂ ಜಗವನ್ನು ಬೆಳಗಿಸುತ್ತಿರಲು ||
ಆಕಾಶದ ವಿಶಾಲ ರಂಗಮಂಚದಲ್ಲಿ
ನಾಟಕ ನಡೆವುದು ದಿನರಾತ್ರಿ ಇಲ್ಲಿ ||

೦೦

೧೮. "ಕುಣಿಯುವ ಬಾರೆ..... ತಾ ಥೈ ಥೈ ತತ್"




ಕುಣಿಯುವ ಬಾರೆ ತಾ ಥೈ ಥೈ ತತ್
ಕುಣಿಯುವ ಬಾ ನಾವ್ ಆ ಥೈ ಥೈ ತತ್ ।
ರಂಗಿನ ಲಂಗದ ಚುಂಗ್ಹಿಡಕೊಂಡು
ಛಂಗನೆ ಛಂಗನೆ ಮುಂದಕೆ ನೆಗೆದು
ಧೀಂ ತನ ಧೀಂ ತನ ಧೀಂ ಧೀಂ ಧೀಂ ತನ ।
ಬಣ್ಣದ ರವಿಕೆಗೆ ಜರತಾರಿ ಅಂಚು
ನೀರಿಗೆ ಹೊದಿಕೆಲಿ ತಾರೆಗಳ್ ಮಿಂಚು
ತೋಂ ತನ ಧೀಂ ತನ ತೋಂ ತೋಂ ಧೀಂ ತನ ।
ನೀಳದ ಜಡೆಗೆ ಮುಡಿದಾ ಮಲ್ಲಿಗೆ
ಮುತ್ತಿನ ಗೊಂಡೆಯು ತೂಗುವ ಚೌರಿಗೆ

ಧೀಂ ತನ ಧೀಂ ತನ ಧೀಂ ಧೀಂ ಧೀಂ ತನ
ಕಣ್ಣಿಗೆ ಕಾಡಿಗೆ ಮುಖಕ್ಕೆ ಮೆರುಗು
ಕೋಮಲ ಕೈಗಳಿಗೆ ಮದರಂಗಿ ಬೆಡಗು
ಧೀಂ ತನ ಧೀಂ ತನ ಧೀಂ ಧೀಂ ಧೀಂ ತನ ।
ಹಣೆಯಲಿ ಮಿಂಚಿದೆ ಬೈತಲುಮಣಿ
ಮೂಗಲಿ ಮೂಗುತಿ, ಕಿವಿಯಲಿ ಝುಮುಕಿ
ತೋಂ ತನ ತೋಂ ತನ ತೋಂ ತೋಂ ತೋಂ ತನ ।
ಹವಳ ಮುತ್ತಿನ ಹಾರ ಕಾಸಿನಸರ ಕೊರಳಲಿ
ಪೋಚೆಗಳು ಕೈಯಲಿ ಹರಳುಂಗುರ ಬೆರಳಲಿ
ಧೀಂ ತನ ಧೀಂ ತನ ಧೀಂ ಧೀಂ ಧೀಂ ತನ ।
ಕೈತುಂಬಾ ಬಳೆಗಳು ತೋಳಿಗೆ ತೋಳ್ ಬಂದಿ
ಕಟಿಗೆ ಕಟ್ಟಿದ ಹೊಳೆವ ಚಿನ್ನದ ಬಂದಿ
ತೋಂ ತನ ತೋಂ ತನ ತೋಂ ತೋಂ ತೋಂ ತನ ।
ಕಾಲಿಗೆ ನೂಪುರ, ಘಲ.. ಘಲ.. ಘಲ ಗೆಜ್ಜಿ
ಹಿಮ್ಮೇಳದಿ ಕೇಳುವ ಸಂಗೀತದಸುಗ್ಗಿ
ಧೀಂ ತನ ಧೀಂ ತನ ಧೀಂ ಧೀಂ ಧೀಂ ತನ ।
ನಾಟ್ಯ ಮಹಾಗುರು ನಟರಾಜನಿಗೆ
ಗುರುಗಳ ಚರಣಕೆ ಶತ ಶತ ವಂದನೆ
ತೋಂ ತನ ತೋಂ ತನ ತೋಂ ತೋಂ ತೋಂ ತನ ।
ತದಿಯನ ಥೈ ತದಿಯನ ಥೈ ತದಿಯನ ಥೈ ॥

೬೬

೧೯. ರಸ್ತೆ ನಿಯಮಗಳು

(ಪಠ್ಯಕ್ರಮ ಆಧಾರಿತ)




ಓಡಾಡುವಾಗ ರಸ್ತೆಯಲಿ
ರಸ್ತೆನಿಯಮ ಮರೆಯದಿರಿ
ರಸ್ತೆಯ ಮೇಲೆ ಆಡಬೇಡಿ
ದಾಟುವಾಗ ಓಡಬೇಡಿ
ರಸ್ತೆಮೇಲೆ ನಡೆದರೆ
ನಿಮಗಾಗಿಯೇ ಇದೆ ಕಾಲುರಸ್ತೆ
ರಸ್ತೆ ದಾಟಬೇಕಿದೆಯೆ ?
ಎಡಗಡೆ ನೋಡಿ ಅರ್ಧ ರಸ್ತೆ
ಮಿಕ್ಕಿದ ಅರ್ಧ ನೋಡಿ ಬಲಕೆ
ದಾಟಿ ಝೀಬ್ರಾ ಕ್ರಾಸಿಂಗ್‌ನಲ್ಲೆ

ಟ್ರಾಫಿಕ್ ಸಿಗ್ನಲ್ ಇದ್ದರೆ
ಕಾಯ್ತಾ ಇರಿ ಸರಿ ಸಿಗ್ನಲ್‌ಗೆ
ಕೆಂಪು ದೀಪ ಇದ್ದರೆ ನಿಂತುಕೊಳ್ಳಿ
ಹಸಿರು ದೀಪ ಬಂದ್ರೆ ದಾಟಿಕೊಳ್ಳಿ
ರಸ್ತೆ ನಿಯಮ ಪಾಲಿಸಿದರೆ
ಸುರಕ್ಷೆ ತಾನದು ನಿಮಗಿರದೆ ।

೨೦. ಜನ್ಮದಿನಕೆ ಶುಭಾಶಯ

(ಜನ್ಮದಿನದಂದು ಹೇಳಬಹುದು)




ಜನ್ಮದಿನ ಜನ್ಮದಿನ
ಸಂತಸದ ಜನ್ಮದಿನ
ಬಲೂನ ಕಟ್ಟಿ
ಚಪ್ಪಾಳೆ ತಟ್ಟಿ
ಕೇಕು ಬೇಕು
ಕೇಕೆ ಹಾಕು
ಹಾಡ ಹಾಡು
ನೃತ್ಯ ಮಾಡು
ಆಟ ಆಡು

ತಿರುಗು ತಿರುಗು
ಸಂಗೀತ ಕೇಳಲು
ನಿಲ್ಲು ನಿಲ್ಲು
ಸಂಗೀತ ನಿಲ್ಲಲು
ಕುರ್ಚಿ ಸಿಗದಿರೆ
ನೀನು ಹೊರಗೆ
ಕೊನೆಗೂ ಉಳಿದವ
ಗಳಿಸಿದ ಜಯವ
ಕೊಡಿರಿ ಅವಗೆ
ಒಳ್ಳೇ ಕಾಣಿಕೆ
ಗೆಳೆಯ ನಿನ್ನ ಜನ್ಮದಿನಾ
(ಗೆಳೆಯನ ಹೆಸರು ಬಳಸಬಹುದು)
ಶುಭ ಕೋರುವೆ ನಿನಗೆ ನಾ
ಬಾಳು ವರ್ಷ ಸಾವಿರಾ
ಹೊಂದು ಕೃಪೆಯ ದೇವರಾ

೧೧

೨೧. "ಬನ್ನಿ ಆಡೋಣ ಬನ್ನಿ"



ಬಾಲಕಿಯರು – ಬಾರೆ ಗೀತಾ ಬಾರೆ ಸೀತಾ
ಬಾರೆ ಮೀರಾ ಬಾರೆ ತಾರಾ –
ಬಾರೆ ಬಾ ಬೇಗ ಬಾ
(ಲಾಲಲಾಲಲಾ... ಲಾಲಲಾಲಲಾ
ಲಾಲ ಲಾಲಲಾಲಲಾಲ
ಲಾಲಲಾಲಲಾ)

ಬಾಲಕರು – ಬಾರೊ ಮಂಜು ಬಾರೊ ಸಂಜು
ಬಾರೋ ರಾಮಾ ಬಾರೋ ಶ್ಯಾಮಾ –
ಆಡ ಬಾ, ಓಡಿ ಬಾ
(ಲಾಲ...)

ಎಲ್ಲರೂ – ಎಲ್ಲ ಸೇರಿ ಬಯಲಿನಲ್ಲಿ
ಆಟ ಆಡುವಾ ಬನ್ನಿ .
ಬೇಗ ಬನ್ನಿ, ಓಡಿ ಬನ್ನಿ (ಲಾಲ...)

ಬಾಲಕಿಯರು – ಹಗ್ಗದಾಟ ಆಡುವಾ
ಜಿಗಿದು ಜಿಗಿದು ಕುಣಿಯುವಾ
ಜಿಗಿ ಜಿಗಿ, ಕುಣಿ ಕುಣಿ (ಲಾಲ...)

ಬಾಲಕರು – ಕುಂಟೆ ಕುಂಟೆ ಹಿಡಿಯುವಾ
ಓಡಿ ಓಡಿ ತಪ್ಪಿಸುವಾ
ಕುಂಟು ಕುಂಟು, ಓಡು ಓಡು
(ಲಾಲ...)

ಬಾಲಕಿಯರು – ಗೆರೆಯ ಗೀರಿ ನೆಲದ ಮೇಲೆ
ಆಡೋಣ ನಾವು ಕುಂಟು ಬಿಲ್ಲೆ
ಬಿಲ್ಲೆ ಒಗಿ, ಜೋರು ಜಿಗಿ (ಲಾಲ...)

ಬಾಲಕರು – ಕಣ್ಣು ಮುಚ್ಚಿ, ಬಚ್ಚಿ ಕುಳಿತು
ಕಂಡು ಹಿಡಿ ನಮ್ಮ ಜಾಡು
ಕಣ್ಣು ಮುಚ್ಚು, ಬಚ್ಚಿ ಕೂಡು
(ಲಾಲ...)

ಎಲ್ಲರೂ – ಮಳೆ ಬಂದ್ರೆ, ಮನೆಗೆ ಬಂದು
ಮಳೆಯ ಸೆಳವು ನೋಡುವಾ
ಠಪ್ ಠಪ್, ರಪ್, ರಪ್
(ಲಾಲ...)

ಬಾಲಕಿಯರು – ಮಳೆ ನಿಂತ್ರೆ ಒತ್ತಿ ಮರಳು
ಗುಬ್ಬಿ ಗೂಡ ಕಟ್ಟುವಾ
ಒಟ್ಟು, ಒಟ್ಟು, ತಟ್ಟು ತಟ್ಟು
(ಲಾಲ...)

ಬಾಲಕರು – ತೋಟದಲ್ಲಿ ಗುಂಪುಗೂಡಿ
ಕತೆ, ಒಗಟು ಹೇಳುವಾ
ಹೇಳಿ ಹೇಳಿ, ಕೇಳಿ ಕೇಳಿ
(ಲಾಲ...)

ಬಾಲಕಿಯರು – ಸಂಜೆ ಮೇಲೆ ಮಹಡಿ ಏರಿ
ಆಡುವಾ ಅಂತಾಕ್ಷರಿ
ಸ ಬಂತು , ಕ ಬಂತು (ಲಾಲ...)

ಎಲ್ಲರೂ – ಜೊತೆ ಸೇರಿ ಕೈಯ ತಟ್ಟಿ
ಕುಣಿದು ಹಾಡೋಣ ಬನ್ನಿ
ಹಾಡು ಹಾಡು, ಕುಣಿ ಕುಣಿ
(ಲಾಲ...)

೧೧

೨೨. ನೀನು ಸಮಯ !




ಗಳಿಗೆಯೂ ನಿಲದೋಡುವ
ದಾರಿಕಾರ ನೀನೆ ಸಮಯ
ಪ್ರತಿಗಳಿಗೆ ಚಲಿಸುತಿರುವೆ
ನಿಮಿಷಕೆ ಅರವತ್ತು ಗಳಿಗೆ
ಅರವತ್ತು ನಿಮಿಷ ಗಂಟೆಗೆ
ದಿನಕೆ ಇಪ್ಪತ್ನಾಲ್ಕು ಗಂಟೆ
ಒಂದು ವಾರಕೆ ಏಳು ದಿನ
ತಿಂಗಳಿಗೆ ಮೂವತ್ತು ದಿನ
ತಿಂಗಳು ಹನ್ನೆರಡು ಮುಗಿಯೆ
ವರ್ಷ ಆಗುವುದೊಂದು ಸರಿಯೆ

ದಣಿವು ಬಳಲಿಕೆ ನಿನಗಿಲ್ಲ
ವಿಶ್ರಾಂತಿ ಪಡೆವ ನೆಪವಿಲ್ಲ
ಜನನ ಮರಣಗಳ ಗೊಡವೆಯಿಲ್ಲ
ದಿನ ರಾತ್ರಿಯ ಪರಿವೆಯಿಲ್ಲ
ಮಳೆ ಬರಲಿ ಬರ ಬರಲಿ
ನೆರೆ ಬರಲಿ ಸುನಾಮಿ ಬರಲಿ
ಬರಲಿ ಭೂಕಂಪ ಜ್ವಾಲಾಮುಖಿ
ನೀನು ಮಾತ್ರ ಅಗ್ರಮುಖಿ

* (ಪಾಠ್ಯಕ್ರಮ ಆಧಾರಿತ)

೨೩. ಸೌರಮಂಡಲ



ಸೂರ್ಯ ಕೇಂದ್ರ ಸೌರಮಂಡಲಕೆ
ನವಗ್ರಹಗಳು ಸೂರ್ಯನಿಗೆ
ಸೂರ್ಯನ ಸುತ್ತ ಹಾಕುತಿವೆ
ತಮ್ಮ ಕಕ್ಷಗಳಲಿ ಪ್ರದಕ್ಷಿಣೆ
ಬುಧನಿದರಲಿ ಮೊದಲ ಗ್ರಹ
ಸೂರ್ಯನಿಗಿದು ಅತಿ ಸನಿಹ
ಶುಕ್ರನೆರಡನೆಯ ಗ್ರಹ
ಮಿಣುಕುತಿದೆ ತನ್ನ ತೇಜದಿಂದ
ಮೂರನೆಯ ಗ್ರಹ ನಮ್ಮ ಪೃಥ್ವಿ

ಜಲ, ವಾಯು, ಜೀವನವು ಇಲ್ಲಿ
ಚಂದ್ರ ಪೃಥ್ವಿಯ ಉಪಗ್ರಹ
ಹೋಗಿ ಬಂದನಲ್ಲಿ ಮನುಜ
ನಾಲ್ಕನೆ ಗ್ರಹವು ಮಂಗಳ
ಪೃಥ್ವಿಗೆ ಹತ್ತಿರ ಬಹಳ
ಅಂತರಿಕ್ಷ ಯಾತ್ರಿಕರು
ಮಂಗಳಕೆ ಹೋಗಿ ಬಂದಿಹರು
ಐದನೆ ಗ್ರಹ ತಾ ಗುರು
ಮಂಡಲದಿ ದೊಡ್ಡ ಗ್ರಹವದು
ಆರನೆ ಗ್ರಹವದುವೆ ಶನಿ
ಸುತ್ತುಗಳಿದರ ವಿಶೇಷವೆನ್ನಿ
ಏಳನೇಗ್ರಹ ಯುರೇನಸ್
ಎಂಟನೇಯ ಗ್ರಹ ನೆಪ್ಚೂನ್
ಪ್ಲೂಟೊ ಒಂಬತ್ತನೇ ಗ್ರಹವು
ಬರಿಗಣ್ಣಿಗೆ ಈ ಮೂರು ಕಾಣವು
ಶುಕ್ರ, ಯುರೇನಸ್ ಎರಡೇ
ವಿರುದ್ಧ ದಿಶೆಯಿಂದ ಸುತ್ತುತಿವೆ
ಸೂರ್ಯ ಉಷ್ಣತೆ, ಬೆಳಕ ಕೊಡುವ
ಜೀವನಕೆಲ್ಲಾ ಆಧಾರನವ

---

* (ಪಾಠ್ಯಕ್ರಮ ಆಧಾರಿತ) ೮೮



ಲೇಖಕಿಯನ್ನು ಕುರಿತು

ರಾಧಾ ಕುಲಕರ್ಣಿಯವರು ಲಲಿತ ಕಲೆಗಳಿಗೆ ಹೆಸರಾದ ಗದುಗಿನ ಪಾಗೆ ಮನೆತನದವರು. ಸಾಹಿತ್ಯ ಹಾಗೂ ನಾಟಕಗಳ ಪರಿಸರದಲ್ಲಿ ಬೆಳೆದಿದ್ದಾರೆ. ಶಿಕ್ಷಕಿಯಾಗಿ ದೀರ್ಘಕಾಲ (೪೦ ವರ್ಷ) ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವಾಗ ಪಾಠದ ಜೊತೆ ಜೊತೆಗೆ ತಮ್ಮಲ್ಲಿದ್ದ ಲಲಿತಕಲೆಗಳನ್ನು ಮಕ್ಕಳ ಜೊತೆ ಹಂಚಿಕೊಂಡು ಅವರ ಸರ್ವಾಂಗೀಣ ವಿಕಾಸಕ್ಕೆ ಹೆಣಗಿದ್ದಾರೆ. ಅಂತೇ ಅವರ ಈ ಪ್ರತಿಭೆಯನ್ನು ಗುರುತಿಸಿ ಸರಕಾರ ಹಾಗೂ ಅನ್ಯ ಸಂಸ್ಥೆಗಳು ಅವರಿಗೆ ಅನೇಕ ಪುರಸ್ಕಾರಗಳಿಂದ ಗೌರವಿಸಿವೆ. ಅವುಗಳಲ್ಲಿ ಪ್ರಮುಖವಾದವು ಈ ಕೆಳಗಿನಂತಿವೆ-

★೧೯೮೦ ಹಾಗೂ ೨೦೦೩ರಲ್ಲಿ NCERT ಯವರಿಂದ ಸ್ಕೂಲಿನಲ್ಲಿ ಅನ್ವೇಷಣೆಗಳು ಮಾಲಿಕೆಯಲ್ಲಿ ಎರಡು ಸಲ ರಾಷ್ಟ್ರೀಯ ಪುರಸ್ಕಾರ. ★ [illegible]ರಲ್ಲಿ ಕೇಂದ್ರೀಯ ವಿದ್ಯಾಲಯ ಸಂಘಟನ - ಮುಂಬಯಿ ವಿಭಾಗದಿಂದ "Eminent Teacher" ಪುರಸ್ಕಾರ. ★ ೧೯೯೦ರಲ್ಲಿ ''ಇಂಡಿಯನ್ ಕೌನ್ಸಿಲ್ ಫಾರ್ ಚೈಲ್ಡ್ ಎಜ್ಯುಕೇಶನ್'' (Indian Council for Child Education) ಸಂಸ್ಥೆಯಿಂದ ರಾಷ್ಟ್ರೀಯ ಪುರಸ್ಕಾರ. (ವಿಶ್ವವಿದ್ಯಾಲಯ ಮಟ್ಟದ ವರೆಗೆ ೨೫ ಶಿಕ್ಷಕರ ಆಯ್ಕೆ ದಿಲ್ಲಿಯಲ್ಲಿ ಮೂರು ದಿನಗಳ ಶಿಕ್ಷಣ ಸಮ್ಮೇಲನದ ನಂತರ ಡಾ. ಕರಣಸಿಂಗ್ ಅವರಿಂದ ಪುರಸ್ಕಾರ ವಿತರಣೆ). ★ ೧೯೯೩ ರಲ್ಲಿ NCERT ಯಿಂದ ಶೈಕ್ಷಣಿಕ ಆಟ ತಯಾರಿಕೆಗೆ ಪುರಸ್ಕಾರ. ★ [illegible] ರಲ್ಲಿ ಕೇಂದ್ರಿಯ ವಿದ್ಯಾಲಯ ಸಂಘಟನದಿಂದ 'Incentive Award". ★ [illegible]ರಲ್ಲಿ ''ರೋಟರಿ ಇಂಟರನ್ಯಾಶನಲ್, ಬೆಂಗಳೂರ ಮೆಟ್ರೊ,'' ಇವರಿಂದ ಪ್ರಶಂಸಾ ಪ್ರಮಾಣ ಪತ್ರ. ★ ೧೯೯೯ರಲ್ಲಿ ಭಾರತ ಸರಕಾರದವರಿಂದ ರಾಷ್ಟ್ರೀಯ ಪುರಸ್ಕಾರ ಭಾರತದ ರಾಷ್ಟ್ರಪತಿ ಮಹಾಮಹಿಮ ಶ್ರೀ ಕೆ. ಆರ್. ನಾರಾಯಣ ಅವರಿಂದ ಸ್ವೀಕಾರ. ★ ೧೯೯೯ರಲ್ಲಿ ರೋಟರಿ ಕ್ಲಬ್- ಬೆಂಗಳೂರ ರೆಸಿಡೆನ್ಸಿಯವರಿಂದ ಗೌರವ ಹಾಗೂ ಪ್ರಶಂಸಾ ಪ್ರಮಾಣಪತ್ರ. ★ ೨೦೦೦ರಲ್ಲಿ ''ರಾಷ್ಟ್ರೀಯ ಬಾಲ ಭವನ- ಹೊಸದಿಲ್ಲಿ'' ಯವರ ಪರವಾಗಿ ಆಯೋಜಿಸಿದ "Visual and Performing Arts" ಕಾರ್ಯಶಾಲೆಯಲ್ಲಿ ಒಂದು ತಿಂಗಳ ತರಬೇತಿಯ ನಂತರ ಪ್ರಶಂಸಾ ಪ್ರಮಾಣ ಪತ್ರ. ★ ೨೦೦೫ ನೇ ವರ್ಷದಲ್ಲಿ ಶ್ರೀ ಕುವೆಂಪು ಸಮುದಾಯ ಪ್ರಗತಿ ವೇದಿಕೆಯ ಪರವಾಗಿ ''ಶಿಕ್ಷಕ ಶ್ರೀ'' ಪ್ರಶಸ್ತಿ.

ಪ್ರಸ್ತುತ ಕವನ ಸಂಕಲನದಲ್ಲಿ ಅವರ ಶಿಕ್ಷಕ ಮನೋವೃತ್ತಿ ಹಾಸುಹೊಕ್ಕಾಗಿ ಮೂಡಿ ಬಂದಿದೆ ಇದರಲ್ಲಿ ಬರುವ ಅನೇಕ ಕವನಗಳು ಪಠ್ಯಕ್ರಮ ಆಧಾರಿತವಾಗಿಯೋ ಅಥವಾ ಸ್ಕೂಲಿನಲ್ಲಿ ಆಚರಿಸಲಾಗುವ ಅನೇಕ ಚಟುವಟಿಕೆ, ಕಾರ್ಯಕ್ರಮಗಳಿಗೆ ಯೋಗ್ಯವಾಗಿರುವದು ಸ್ಪಷ್ಟವಾಗಿ ಕಾಣುತ್ತದೆ. ಈ ಕವನಗಳು ಮಕ್ಕಳ ಕಲಿಕೆಯಲ್ಲಿ ಪರಿಣಾಮಕಾರಿಯಾಗಿ ಪ್ರಯೋಜನಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ - [illegible]